ಇದು ಪತ್ರಿಕೆಯಲ್ಲಿ ಫ್ರಂಟ್‌ಲೈನ್‌ನಲ್ಲಿ ಬಂದಿದೆ.

ಅಧ್ಯಕ್ಷರು.—ನೀವು ಈ ವಿಷಯವನ್ನು ಮಾನ್ಯ ಸಭೆಯ ಗಮನಕ್ಕೆ ತಂದಿದ್ದೀರಿ. ಆಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಶ್ರೀ ವೀರಪ್ಪ ಮೊಯಿಲಿಯವರು ಅತಿಮಹತ್ವವಾದ ವಿಚಾರವನ್ನು ಎತ್ತಿದ್ದಾರೆ. ಈ ಬಗ್ಗೆ ಸೂಕ್ತವಾದಂಥ ರೀತಿಯಲ್ಲಿ ಇರತಕ್ಕಂಥ ಸಂಶಯವನ್ನು ನಿವಾರಣೆ ಮಾಡುವುದು ಸರ್ಕಾರದ ಕರ್ತವ್ಯ. ಆದರೆ ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ನೀರಾವರಿ ಮಂತ್ರಿಗಳು ಡೆಲ್ಲಿಯಲ್ಲಿ ಜಲಸಂಪನ್ಮೂಲ ಮಂಡಳಿ ಸಭೆಯಲ್ಲಿ ಭಾಗವಹಿಸಲು ಅಲ್ಲಿಗೆ ಹೋಗಿದ್ದಾರೆ. ಅವರು ಬಂದಮೇಲೆ ಈ ವಿಚಾರವನ್ನು ತಿಳಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ದಿವಸವೇ ಅವರಿಗೆ ಕನ್ವೇ ಮಾಡಿಬಿಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಯಿತು ಕನ್ವೇ ಮಾಡುತ್ತೇನೆ. ನಿಮ್ಮ ಎಲ್ಲಾ ಭಾವನೆಗಳನ್ನು ಅವರಿಗೆ ತಿಳಿಸುತ್ತೇನೆ. ಈ ವಿಚಾರದಲ್ಲಿ ಮತ್ತೊಂದು ಸಾರಿ ಸೂಕ್ತವಾದ ಉತ್ತರವನ್ನು ಕೊಡಿಸುತ್ತೇನೆ. ಈ ವಿಚಾರವನ್ನು ಅವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು.—ಸಾಕು ಬಿಡಿ. ಕನ್ವೇ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ. ಶ್ರೀ ಕೋಳಿವಾಡ್ ಅವರೇ ನೀವು ಕೇಳಿರಿ.

ರಾಣೆಬೆನ್ನೂರು ತಾಲ್ಲೂಕು, ತುಪ್ಪೇಲೂರು ಗ್ರಾಮದಲ್ಲಿರುವ ಪರಿಶಿಷ್ಟ ಜನಾಂಗದವರಿಗೆ ವಿದ್ಯುತ್‌ದೀಪ ಒದಗಿಸುವುದು.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಣೆಬೆನ್ನೂರು ತಾಲ್ಲೂಕು ತುಪ್ಪೇಲೂರ ಗ್ರಾಮದ ಪರಿಶಿಷ್ಟ ಜನಾಂಗದವರ ಓಣಿಯಲ್ಲಿ ವಿದ್ಯುತ್ ಬೀದಿ ದೀಪಗಳು ಇಲ್ಲದೇ ಇರುವುದು ಶೋಚನೀಯ. ಸದರಿ ಗ್ರಾಮ ಪಂಚಾಯತಿಯವರು ವಿದ್ಯುತ್ ಮಂಡಳಿಗೆ ಅರ್ಜಿ ಸಲ್ಲಿಸಿ ತುಂಬ ಬೇಕಾದ ಹಣವನ್ನು ತುಂಬಿ ಆನೇಕಸಲ ವಿನಂತಿಸಿಕೊಂಡಿರುವರಲ್ಲದೆ ಸ್ಥಾನಿಕ ಶಾಸಕರೂ ಸಹ ವಿನಂತಿಸಿಕೊಂಡಿರುತ್ತಾರೆ. ಈಗಾಗಲೇ ಸದರಿ ಓಣಿಯಲ್ಲಿ ವಿದ್ಯುತ್ ಕಂಬಗಳು ನಿಂತಿದ್ದು ಎರಡು ವಾಯರುಗಳನ್ನು ಹಾಕಿ ಖಾಸಗಿ ಮನೆಗಳಿಗೆ ವಿದ್ಯುತ್ ಸರಬರಾಜು ಮಾಡಿರುತ್ತಾರೆ. ಆದೇ ಕಂಬಗಳಿಗೆ ಇನ್ನೂ ಒಂದು ವಾಯರನ್ನು ಎಳೆದು ಬೀದಿ ದೀಪಗಳನ್ನು ಕೊಡಿಸುವಲ್ಲಿ ಅಧಿಕಾರಿಗಳ ಅಲಕ್ಷ್ಯತನದಿಂದ ನಿಮ್ನವರ್ಗದ ಜನರು ಅನೇಕ ಪರ್ಷಗಳಿಂದ ರಾತ್ರಿ ವೇಳೆಯಲ್ಲಿ ಬೆಳಕನ್ನು ಪಡೆಯಲು ವಂಚಿತರಾಗಿದ್ದಾರೆ. ಆದ್ದರಿಂದ ವಿದ್ಯುತ್ ಖಾತೆಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶವನ್ನು ನೀಡಿ ತಕ್ಷಣವೇ ಬೀದಿದೀಪಗಳ ವ್ಯವಸ್ಥೆ ಆಗುವಂತೆ ಆದೇಶ ನೀಯುತ್ತೀರಿ ಎಂದು ನಂಬಿ ಈ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದು ಸೂಕ್ತ ಆದೇಶವನ್ನು ಕೊಡಿಸುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

ಆ) ವಿಧೇಯಕಗಳನ್ನು ಮಂಡಿಸುವುದು.

ಅಧ್ಯಕ್ಷರು.—೧೯೮೭ನೇ ಇಸವಿಯ ಕರ್ನಾಟಕ ಸ್ಟ್ಯಾಂಡು (ತಿದ್ದುಪಡಿ) ವಿಧೇಯಕ—ಈ ಮಸೂದೆಯನ್ನು ಮುಂದಕ್ಕೆ ಹಾಕಲಾಗಿದೆ.